## 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

ಎಸ್‌ಸಿ. 110/2017

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ ಶ್ರೀ ರಮೇಶ್ | ಪ್ರಮಾಣ ಮಾಡಿಸಿದ ದಿನಾಂಕಃ | |
| ತಂದೆ/ಗಂಡನ ಹೆಸರು | ಃ ಶ್ರೀ ಗೋವಿಂದ ರಾಮಯ್ಯ | 10.09.2024 | |
| ವಯಸ್ಸು | ಃ 65 ವರ್ಷ | | |
| ವೃತ್ತಿ | ಃ ನಿವೃತ್ತ ಪಿ.ಡಬ್ಲ್ಯೂಡಿ ಇಂಜಿನಿಯರ್ | ಪ್ರಾ.ಸಾ. ಃ | 30 |
| ವಾಸಸ್ಥಳ | ಃ ಮೈಸೂರು | ಚಾ.ಸಾ. ಃ | 49 |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ನಾನು *2006* ರಿಂದ *2018* ರವರೆಗೆ ನಾನು ಕೊಳ್ಳೆಗಾಲ ಉಪ ವಿಭಾಗದಲ್ಲಿ ಅಸಿಸ್ಟಂಟ್ ಇಂಜಿನಿಯರ್ ಆಗಿ ಕೆಲಸ ಮಾಡಿದ್ದೇನೆ. ದಿಃ*02.01.2017* ರಂದು ವಿ.ವಿ.ಪುರಂ ಪೋಲೀಸ್ ಠಾಣೆಯ ಮೊ.ಸಂಖ್ಯೆ *142/2016* ಪ್ರಕರಣದಲ್ಲಿ ತನಿಖಾಧಿಕಾರಿಯ ವಿನಂತಿ ಪತ್ರ ಬಂದ ಮೇರೆಗೆ ದಿಃ*03.01.2017* ರಂದು ಕೊಳ್ಳೆಗಾಲದ ಸತ್ತೆಗಾಲ ಬ್ರಿಡ್ಜ್ ಬಳಿ ಆಯುಧಗಳು ದೊರೆತ ಸ್ಥಳದಲ್ಲಿ ನಕಾಶೆಯನ್ನು ಎ.ಎಸ್.ಐ ನಾಗರಾಜು ಇವರು ಸ್ಥಳವನ್ನು ತೋರಿಸಿದ ಮೇರೆಗೆ ಆ ಸ್ಥಳದ ನಕಾಶೆ ತಯಾರಿಸಿ ಕೊಟ್ಟಿದ್ದೇನೆ. ಈಗ ನಾನು ನೋಡುತ್ತಿರುವ ನಕಾಶೆ ಅದೇ ಇದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ನಕಾಶೆಯನ್ನು ನಿ.ಪಿ-*114* ಮತ್ತು ಸಹಿಯನ್ನು ನಿ.ಪಿ-*114(ಎ)* ಎಂದು ಗುರುತಿಸಿದೆ. ನಿ.ಪಿ-*114* ರಲ್ಲಿ ಕೈ ತಪ್ಪಿನಿಂದಾಗಿ ಸಹಿ ಕೆಳಗೆ ದಿನಾಂಕ *03.01.2016* ಎಂದು ನಮೂದಿಸಲಾಗಿದೆ. ನಾನು ತಯಾರಿಸಿದ್ದ ನಕಾಶೆಯನ್ನು ಸಹಾಯಕ ಕಾರ್ಯಪಾಲಕ

ಅಭಿಯಂತರರ ಮೂಲಕ ತನಿಖಾಧಿಕಾರಿಗೆ ಕಳುಹಿಸಲಾಯಿತು. ಈಗ ನಾನು ನೋಡುತ್ತಿರುವ ದಾಖಲೆ ಸಹಾಯಕ ಕಾರ್ಯಪಾಲಕ ಅಭಿಯಂತರರು ಕಳುಹಿಸಿದ್ದ ಪತ್ರ ಇದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆಯನ್ನು ನಿ.ಪಿ-*115* ಮತ್ತು ಸಹಿಯನ್ನು ನಿ.ಪಿ-*115(ಎ)* ಎಂದು ಗುರುತಿಸಿದೆ.

<u>ಪಾಟೀ ಸವಾಲು : 1 ಮತ್ತು 2 ನೇ ಆರೋಪಿ ಪರ ವಕೀಲರಾದ ಶ್ರೀ ವಿ.ಬಿ.ಎನ್ ರವರಿಂದಃ-</u>

*2.* ನಕಾಶೆಯಲ್ಲಿ ಆರೋಪಿತರು ಯಾವ ಸ್ಥಳದಿಂದ ಆಯುಧಗಳನ್ನು ಎಸೆದಿದ್ದರು ಎಂದು ನಮೂದು ಇಲ್ಲ. ದಾಖಲೆ ಸರಿಯಿದ್ದಲ್ಲಿ ಮಾತ್ರ ಅದನ್ನು ಕಳುಹಿಸುತ್ತೇವೆ ಎಂದರೆ ನಿಜ. ತಪ್ಪುಗಳು ಕಂಡುಬಂದರೆ ಸರಿ ಮಾಡಿ ವಾಪಸ್ಸು ಕಳುಹಿತ್ತೇವೆ. ನಾನು ಸ್ಥಳಕ್ಕೆ ಹೋಗದೇ ಪೋಲೀಸರ ಹೇಳಿಕೆಯಂತೆ ನಕಾಶೆಯನ್ನು ತಯಾರಿಸಿ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

**ಉಳಿದ ಆರೋಪಿತರ ಪರ ವಕೀಲರು ಈ ಮೇಲಿನಂತೆ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಹೇಳುತ್ತಾರೆ.**

**ಮರು ವಿಚಾರಣೆಃ- ಇಲ್ಲ.**

**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.**

***ಓ ಹೇ ಕೇ ಸ ಇ ಎ ಒ.,***

***4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,***
**ಮೈಸೂರು**